10.	ಹಾಸನ	25.00
11.	ಕೊಡಗು	5.00
12.	ದಕ್ಷಿಣ ಕನ್ನಡ	20.00
13.	ಗುಲ್ಬರ್ಗಾ	85.00
14.	ಬೀದರ್	70.00
15.	ರಾಯಚೂರು	85.00
16.	ಬಳ್ಳಾರಿ	50.00
17.	ಬೆಳಗಾವಿ	50.00
18.	ಬಿಜಾಪುರ	80.00
19.	ಉತ್ತರ ಕನ್ನಡ	10.00
	ಒಟ್ಟು	680.00

ರಾಜ್ಯ ಸರ್ಕಾರವು ಪ್ರವಾಹ ಮತ್ತು ಬರ ಪರಿಹಾರ ಕಾರ್ಯಗಳಿಗಾಗಿ ಕೇಂದ್ರದಿಂದ ಆರ್ಥಿಕ ನೆರವು ಕೋರುವ ವಿವರವಾದ ಮನವಿಪತ್ರವನ್ನು ತಯಾರಿಸುತ್ತಿದ್ದು ಭಾರತ ಸರ್ಕಾರಕ್ಕೆ ಶೀಘ್ರದಲ್ಲಿಯೇ ಸಲ್ಲಿಸಲಾಗುವುದು.

ದಿನಾಂಕ 23.7.94 ಮತ್ತು ಪುನಃ 5.8.94, ಹೀಗೆ ಎರಡು ಬಾರಿ ವಿರೋಧ ಪಕ್ಷಗಳ ನಾಯಕರೊಂದಿಗೆ ಸಮಾಲೋಚಿಸಿರುತ್ತಾರೆ.

ಎಲ್ಲಾ ನೊಂದ ಸಂತ್ರಸ್ಥರಿಗೂ ತುರ್ತು ಪರಿಹಾರವನ್ನು ಒದಗಿಸಲಾಗಿದೆ. ಕೆಲವು ಸಮಯದಲ್ಲಿ, ಖಾಸಗಿ ಆಸ್ತಿಪಾಸ್ತಿಗಳ ಹಾನಿಗೆ ನೀಡಬೇಕಾಗಿರುವ ಪರಿಹಾರವನ್ನು ಪೂರ್ಣವಾಗಿ ವಿತರಿಸಲಾಗುವುದು. ಎಲ್ಲಾ ಅತ್ಯಗತ್ಯ ಸಾರ್ವಜನಿಕ ಆಸ್ತಿಗಳನ್ನು ತಕ್ಷಣ ದುರಸ್ಥಿಗೊಳಿಸಲಾಗುವುದು. ಪ್ರವಾಹ ಮತ್ತು ಬರದಿಂದ ನೊಂದ ಸಂತ್ರಸ್ಥರನ್ನು ಉಪಶಮನಗೊಳಿಸಲು ನಾವು ಶಕ್ತಿಮೀರಿ ಪ್ರಯತ್ನಿಸುತ್ತೇವೆ ಹಾಗೂ ಶೀಘ್ರವಾಗಿ ಬಾಧಿತ ಪ್ರದೇಶಗಳಲ್ಲಿ ಸಾಮಾನ್ಯ ಸ್ಥಿತಿ ಮರಳಲು ಯತ್ನಿಸುತ್ತೇವೆ.

ಉಪಾಧ್ಯಕ್ಷರು : ಈಗ ಖಾಸಗಿ ಸದಸ್ಯರ ನಿರ್ಣಯ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಕಂದಾಯ ಸಚಿವರು ಏನು ಸ್ಟೇಟ್ ಮೆಂಟ್ ಮಾಡಿದರು ಅದರ ಮೇಲೆ ಚರ್ಚೆ ಆಗಬೇಕಲ್ಲ, ಅದಕ್ಕೆ ಬಹಳ ಸಮಯ ಬೇಕಾಗುತ್ತದೆ. ನಿನ್ನೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಅಂಡರ್‌ಸ್ಟ್ಯಾಂಡಿಂಗ್ ಏನಾಗಿತ್ತು ಅಂದರೆ, ಸರ್ಕಾರದವರು ಏನು ಸ್ಟೇಟ್‌ಮೆಂಟ್ ಮಾಡುತ್ತಾರೆ. ಅದರ ಮೇಲೆ ಚರ್ಚೆ ಮಾಡಬೇಕು ಎಂದು. ಈ ಮುಂಜಾನೆ ಅಸೆಂಬ್ಲಿ ಬೇಡ, ಫಂಕ್ಷನ್ ಇದೆ 12 ಕ್ಕೆ ಸೇರೋಣ ಎಂದು ಆಯಿತು. ಈಗ ಸದನದಲ್ಲಿ 15 ಜನ ಸದಸ್ಯರು ಇಲ್ಲ. ಹೀಗಿರುವಾಗ ನನ್ನ ಮಾತು ಯಾರು ಕೇಳಬೇಕು? ನಾನು ಏನು ಸಲಹೆ ಮಾಡುತ್ತಿದ್ದೇನೆಂದರೆ, ಕಂದಾಯ ಸಚಿವರು ಸ್ಟೇಟ್‌ಮೆಂಟ್ ಮಾಡಿದ್ದಾರೆ. ಕೆಲವು ಇವೆ, ಅವುಗಳನ್ನು ಮೂವ್ ಮಾಡಿಕೊಳ್ಳಲಿ. ಅದರ ಜೊತೆಗೆ ಖಾಸಗಿ ಸದಸ್ಯರ ನಿರ್ಣಯ ಇರುವುದರಿಂದ ಮಾನ್ಯ ವಾಟಾಳ್ ನಾಗರಾಜ್ ಅವರು ಬಂದರೆ ಮಾತನಾಡುತ್ತಾರೆ. ಸೋಮವಾರ ಪ್ರಶ್ನೋತ್ತರ ಆದಮೇಲೆ ಮಾನ್ಯ ಕಂದಾಯ ಸಚಿವರು ಏನು ಸ್ಟೇಟ್‌ಮೆಂಟ್ ಮಾಡಿದ್ದಾರೆ ಅದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ವಿತ್ತೀಯ ಕಾರ್ಯಕಲಾಪಗಳು

1994-95ನೇ ಸಾಲಿನ ಬೇಡಿಕೆಗಳ ಮಂಡನೆ ಮತಕ್ಕೆ ಹಾಕುವುದು

ಉಪಾಧ್ಯಕ್ಷರು : ಈಗ ಬೇಡಿಕೆಗಳನ್ನು ಮಂಡಿಸುವುದು, ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು.

1994-95ನೇ ಸಾಲಿನ ಬೇಡಿಕೆಗಳ ಮಂಡನೆ - ಬೇಡಿಕೆಗಳ ಸಂ: 23, 16, 11, 12, 13, 37, 38, 53

ಅಭಿಯಾಚನೆ ಕ್ರಮಾಂಕ : 23 - ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು

ಶ್ರೀ ಬಿ.ಎಸ್. ಪಾಟೀಲ್ (ಆಹಾರ ಮತ್ತು ನಾಗರೀಕ ಸರಬರಾಜುಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜುಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,25,85,66,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವ ಅನುದಾನದ ಬೇಡಿಕೆಯನ್ನು ನಾನು ಸಭೆಯ ಮುಂದೆ ಮಂಡಿಸುತ್ತೇನೆ.

ಅಭಿಯಾಚನೆ ಕ್ರಮಾಂಕ : 16- ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ :

ಶ್ರೀಮತಿ ನಾಗಮ್ಮ ಕೇಶವ ಮೂರ್ತಿ (ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 13,36,04, 02,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವ ಅನುದಾನದ ಬೇಡಿಕೆಯನ್ನು ನಾನು ಸಭೆಯ ಮುಂದೆ ಮಂಡಿಸುತ್ತೇನೆ.

ಅಭಿಯಾಚನೆ ಕ್ರಮಾಂಕ: 11 - ಲೇಖನ ಸಾಮಗ್ರಿ ಮತ್ತು ಮುದ್ರಣ

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯ ಸಚಿವರು ಸ್ವಲ್ಪ ತಡವಾಗಿ ಬರುವುದರಿಂದ ಅವರ ಹೆಸರಿನಲ್ಲಿರತಕ್ಕ ಬೇಡಿಕೆಗಳನ್ನು ನಾನು ಮಂಡಿಸುವುದಕ್ಕೆ ತಮ್ಮ ಅಪ್ಪಣೆ ಕೋರುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : 46 ಜನ ಮಂತ್ರಿಗಳು ಇರುವಾಗ ಅವರ ಪರವಾಗಿ ಇವರೇ ಎಲ್ಲ ಬೇಡಿಕೆಗಳನ್ನು ಮಂಡನೆ ಮಾಡುವುದು ಸೆರಿಯಲ್ಲ. ಡಿಮ್ಯಾಂಡ್ ಎಲ್ಲ ಮಂಡನೆ ಮಾಡುವುದಾದರೆ ಅವರು ಏತಕ್ಕೆ ಮಂತ್ರಿಗಳಾಗಿ ಇರಬೇಕು? ಡಿಮ್ಯಾಂಡ್ ಮಂಡನೆ ಮಾಡುವುದಕ್ಕೆ ಇವರಿಗೆ ಎಲ್ಲಾ ಅಧಿಕಾರ ಕೊಟ್ಟಿದ್ದೀರಾ?

(ಶ್ರೀ ಕೆ. ಶಿವಮೂರ್ತಿಯವರು ಸದನಕ್ಕೆ ಆಗಮಿಸಿದರು)

ಶ್ರೀ ಕೆ. ಶಿವಮೂರ್ತಿ (ವಯಸ್ಕರ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಲೇಖನ ಸಾಮಗ್ರಿ ಮತ್ತು ಮುದ್ರಣ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 21,71,52,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವ ಅನುದಾನದ ಬೇಡಿಕೆಯನ್ನು ನಾನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಕೆ. ಶಿವಮೂರ್ತಿ : (ವಯಸ್ಕರ ಶಿಕ್ಷಣ ರಾಜ್ಯ ಸಚಿವರು)

ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಸಾರ್ವಜನಿಕ ವಾಚನಾಲಯ ಇತ್ಯಾದಿ" ಗೆ

ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 36,16,31,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವ ಅನುದಾನದ ಬೇಡಿಕೆಯನ್ನು ನಾನು ಮಂಡಿಸುತ್ತಿದ್ದೇನೆ.

ಉಪಾಧ್ಯಕ್ಷರು : ಬೇಡಿಕೆ ಮಂಡಿಸಲಾಗಿದೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

(ಉನ್ನತ ಶಿಕ್ಷಣ ಸಚಿವರ ಪರವಾಗಿ)

ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉನ್ನತ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 242,62,92,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 30,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವ ಅನುದಾನದ ಬೇಡಿಕೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯ ವಿಧಾನಮಂಡಲಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 10,39,32,000ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವ ಅನುದಾನದ ಬೇಡಿಕೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನ್ಯಾಯ ಪರಿಪಾಲನೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 61,35,80,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವ ಅನುದಾನದ ಬೇಡಿಕೆಯನ್ನು ಮಂಡಿಸುತ್ತೇನೆ.

ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31-3-1995 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮತೀಯ ಮತ್ತು ಧರ್ಮದಾಯ ಸಂಸ್ಥೆಗಳು ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲಲ್ಲಿ 21,65,25,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವ ಅನುದಾನದ ಬೇಡಿಕೆಯನ್ನು ಮಂಡಿಸುತ್ತೇನೆ.

ಉಪಾಧ್ಯಕ್ಷರು : ಎಲ್ಲ ಬೇಡಿಕೆಗಳನ್ನು ಮಂಡಿಸಲಾಗಿದೆ. ಸೋಮವಾರ ಇದನ್ನು ಚರ್ಚೆಗೆ ಮುಂದೂಡಲಾಗಿದೆ. ಈಗ ವಾಟಾಳ್ ನಾಗರಾಜ್ ಅವರ ಖಾಸಗಿ ನಿರ್ಣಯ.

ಶ್ರೀ ಬಿ.ಎಚ್. ಬನ್ನಿಕೋಡ್ : ಕಳೆದ 5 ವರ್ಷದಿಂದ ಈ ನಿರ್ಣಯ ಬರುತ್ತಿದೆ.

ಉಪಾಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ವಾಟಾಳ್ ನಾಗರಾಜ್ ಅವರನ್ನು ಖಾಸಗಿ ನಿರ್ಣಯದ ಬಗ್ಗೆ ಮಾತನಾಡಲು ಕರೆದಿದ್ದೇನೆ. ಸಿಂಧ್ಯಾ ಅವರು ಮುಂದುವರೆಸುವುದಾದರೆ ಮುಂದುವರೆಸಬಹುದು.

ಶ್ರೀ ಬಿ.ಎಚ್. ಬನ್ನಿಕೋಡ್ : ಅದರ ಬಗ್ಗೆ ಹೇಳುತ್ತಿದ್ದೇನೆ. ಉಪಾಧ್ಯಕ್ಷರೇ; ನಾನು ಶಾಸನಸಭೆಗೆ ಬಂದಾಗಿನಿಂದ ಈ ನಿರ್ಣಯ ಇದೆ. ಬೇರೆ ನಿರ್ಣಯ ಮಾಡಿದರೆ ಏನೂ ಪ್ರಯೋಜನ ಇಲ್ಲ. ಇದನ್ನೇ ಎಷ್ಟು ದಿವಸ ಇಡುತ್ತೀರಿ? 5 ವರ್ಷದ ಅವಧಿಯಲ್ಲಿ ಒಂದು ನಿರ್ಣಯ ಪೂರ್ಣ ಆಗಿಲ್ಲ. ಅದಕ್ಕೆ ಕಾಲ ಮಿತಿ ಇದೆ. ಎಷ್ಟು ಅವಧಿ ಕೊಡಬೇಕೆಂದು ಇದೆ. ಈ ರೀತಿ ಐದು ವರ್ಷ ಒಂದು ನಿರ್ಣಯ ಇಟ್ಟುಕೊಂಡು ಇದಕ್ಕೆ ಮಹತ್ವ ಕೊಡಬಾರದು ಎಂದು ಇಲ್ಲ. ಕೊಡಬೇಕು. ಅದಕ್ಕೆ ಎಷ್ಟು ಕೊಡಬೇಕೋ ಅಷ್ಟು ಕೊಡಬೇಕು, ಮುಕ್ತಾಯ ಮಾಡಬೇಕು. ನಾನು ಈ ಸದನಕ್ಕೆ ಸದಸ್ಯನಾಗಿ ಬಂದಾಗ ತಾಲ್ಲೂಕು ಕೇಂದ್ರಗಳಲ್ಲಿ ರಾಷ್ಟ್ರಧ್ವಜವನ್ನು ತಹಶೀಲ್ದಾರರು ಹಾರಿಸುತ್ತಿದ್ದಾರೆ, ಅಧಿಕಾರಿಗಳು ಹಾರಿಸುತ್ತಿದ್ದಾರೆ, ಆದರೆ ಆಯಾ ತಾಲ್ಲೂಕಿನಲ್ಲಿ ಶಾಸಕರು ಜನಪ್ರತಿನಿಧಿಗಳು ಸಾರ್ವಜನಿಕ ಧ್ವಜಾರೋಹಣ ಮಾಡಲಿಕ್ಕೆ ಇಂಡಿಯನ್ ನ್ಯಾಷನಲ್ ಫ್ಲಾಗ್ ಕೋಡ್‌ಗೆ ತಿದ್ದುಪಡಿ ಮಾಡಲಿಕ್ಕೆ ಈ ಸದನದಲ್ಲಿ ಸರ್ವಾನುಮತದ ನಿರ್ಣಯವನ್ನು ಕೈಗೊಂಡು ಕೇಂದ್ರಸರ್ಕಾರಕ್ಕೆ ಕಳುಹಿಸಿಕೊಡಲಿಕ್ಕೆ ಒಂದು ನಿರ್ಣಯವನ್ನು ತಂದರೆ ಐದು ವರ್ಷವಾದರೂ ಅದು ಸಾಧ್ಯವಾಗಲಿಲ್ಲ. ದಯವಿಟ್ಟು ಈ ನಿರ್ಣಯವನ್ನು ಮುಕ್ತಾಯ ಮಾಡಿ ಬೇರೆ ನಿರ್ಣಯಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಆಗಬಹುದು.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೆ, ಅವರು ಚರ್ಚೆಗೆ ಉತ್ತರ ಕೊಡಬೇಕು. ಸದನದ ನಿಯಮಾವಳಿ ಪ್ರಕಾರ ಅವರು ಚರ್ಚೆ ಮಾಡಿ ಮುಗಿದ ಮೇಲೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡಬೇಕು.

ಉಪಾಧ್ಯಕ್ಷರು : ಸಚಿವರಿಗೆ ಸೂಚಿಸುತ್ತೇನೆ. ಸಂಬಂಧಪಟ್ಟವರು ಬರುವ ಶುಕ್ರವಾರ ಉತ್ತರ ಕೊಡುತ್ತಾರೆ.

ಶ್ರೀ ಸಿ. ಬೈರೇಗೌಡ : ಹಾಗಾದರೆ ಬೇರೆ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ ಅಷ್ಟೆ.

ಉಪಾಧ್ಯಕ್ಷರು : ಈಗ ಸದನವನ್ನು ಮುಂದೂಡಿ ಮತ್ತೆ ಸೋಮವಾರ ದಿನಾಂಕ 29-8-94ರಂದು ಬೆಳಗ್ಗೆ 11 ಗಂಟೆಗೆ ಸಮಾವೇಶವಾಗುತ್ತದೆ.

(ಸದನವು 2 ಗಂಟೆ 40 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ದಿನಾಂಕ 29-8-94ರಂದು ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ನಿರ್ಣಯಿಸಿತು.)

(+ ಈ ಚಿಹ್ನೆ - ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)